## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 61 (76)
ಸದಸ್ಯರ ಹೆಸರು : ಡಾ: ಉಮಾಶ್ರೀ
ಉತ್ತರಿಸಬೇಕಾದ ದಿನಾಂಕ : 27.01.2026
ಉತ್ತರಿಸಬೇಕಾದ ಸಚಿವರು : ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಂದಾಯ ಬಡಾವಣೆಗಳಲ್ಲಿ ನಿರ್ಮಿಸಿದ ಮನೆಗಳಿಗೆ ಮತ್ತು ರಚಿಸಿರುವ ನಿವೇಶನಗಳಿಗೆ ಬಿ-ಖಾತಾ ನೀಡಲಾಗುತ್ತಿದೆಯೇ; | ದಿನಾಂಕ:10-09-2024ರ ಪೂರ್ವದಲ್ಲಿ ಅನಧಿಕೃತವಾಗಿ ರಚಿಸಲಾದ ಸ್ವತ್ತುಗಳಿಗೆ ಬಿ-ಖಾತಾ ನೀಡಲು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ಕ್ಕೆ ತಿದ್ದುಪಡಿ ತರಲಾಗಿದೆ ಹಾಗೂ ಬಿ-ಖಾತಾ ಸೃಜಿಸಲು ತೆರಿಗೆ ನಿಯಮಗಳಲ್ಲಿ ತಿದ್ದುಪಡಿ ತರಲಾಗಿದೆ. |
| ಆ) | ನೀಡಿದಲ್ಲಿ, ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಯಾವ ರೀತಿ ಅನುಕೂಲವಾಗಲಿದೆ; | ಅನಧಿಕೃತ ಸ್ವತ್ತುಗಳಿಗೆ ಖಾತಾ ನೀಡುವ ಕಾರ್ಯ ವಿಧಾನ ಕುರಿತು ಪೌರಾಡಳಿತ ನಿರ್ದೇಶನಾಲಯದಿಂದ ಪ್ರಮಾಣಿತ ಕಾರ್ಯ ವಿಧಾನವನ್ನು ಹೊರಡಿಸಲಾಗಿದೆ.<br><br>ಅದರಂತೆ, ನಿಯಮಗಳನ್ನು ಉಲ್ಲಂಘಿಸಿ ರಚಿಸಿರುವ ಅನಧಿಕೃತ ಬಡಾವಣೆ / ಕಂದಾಯ ಬಡಾವಣೆಗಳಲ್ಲಿನ ನಿವೇಶನ, ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಹಾಗೂ ಬಿ-ಖಾತಾ ನೀಡಲು ಕ್ರಮವಹಿಸಲಾಗುತ್ತಿದೆ. ಆದರೆ, ಕೃಷಿ ಉದ್ದೇಶಕ್ಕಾಗಿ ಮೀಸಲಿರುವ ಜಮೀನಿಗೆ ಬಿ-ಖಾತಾ ನೀಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ.<br><br>ಮುಂದುವರೆದು, ಇ-ಖಾತಾ ಅಭಿಯಾನವನ್ನು ಕೈಗೊಳ್ಳುವ ಮೂಲಕ ಇ-ಆಸ್ತಿ ತಂತ್ರಾಂಶದ ಮುಖೇನ ಖಾತಾಗಳನ್ನು ಸೃಜಿಸಿ, ನೀಡಲು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಸೂಚಿಸಲಾಗಿದೆ. |
| ಇ) | ಈ ರೀತಿ ನಗರ ಪಾಲಿಕೆ ಪುರಸಭೆ ಪಟ್ಟಣ ಪಂಚಾಯಿತಿಗಳಿಂದ ನೀಡಿದ ಬಿ-ಖಾತಾ ನಿವೇಶನಗಳಿಗೆ ಮತ್ತು ಕಟ್ಟಡಗಳಿಗೆ ನಕ್ಷೆ ಅನುಮೋದನೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ಪ್ರಕರಣಗಳು ದಾಖಲಾಗಿದೆ; ಈ ರೀತಿ ಪ್ರಕರಣಗಳಲ್ಲಿ ನಕ್ಷೆ ಮಂಜೂರಾತಿ ನೀಡುವ ಬಗ್ಗೆ ಹಾಗೂ ಕ್ರಮವಹಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ಕಲಂ 30 ರನ್ವಯ ಹಾಗೂ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ಕಲಂ 187 ರನ್ವಯ ಭೂ ಪರಿವರ್ತನಾ ಆದೇಶ, ಕ್ರಯಪತ್ರ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಪಡೆದ ವಿನ್ಯಾಸ ನಕ್ಷೆ, ಅಂದಾಜು ಪತ್ರಿಕೆಯೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಒಳಗೊಂಡ ಅರ್ಜಿಯನ್ನು ಆರ್ಕಿಟೆಕ್ಟ್ ಮುಖಾಂತರ ನಿರ್ಮಾಣ್-2 ತಂತ್ರಾಂಶದಲ್ಲಿ ಸಲ್ಲಿಸಿದಲ್ಲಿ, ಅರ್ಜಿ ಸಲ್ಲಿಸಿದ 15 ದಿನಗಳ ಒಳಗಾಗಿ ಕಟ್ಟಡ ಪರವಾನಿಗೆ ನೀಡಲಾಗುತ್ತಿದೆ. ತ್ವರಿತ ಹಾಗೂ ಪಾರದರ್ಶಕವಾಗಿ ಕ್ರಮವಹಿಸಲು "SBPAS/ULMS" ತಂತ್ರಾಂಶವನ್ನು ಬಳಕೆ ಮಾಡಲಾಗುತ್ತಿದೆ.<br><br>ನಕ್ಷೆ ಉಲ್ಲಂಘಿಸಿ, ಅನಧಿಕೃತವಾಗಿ ಕಟ್ಟಡಗಳನ್ನು ಪೂರ್ಣಗೊಳಿಸಿದವರ ವಿರುದ್ಧ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 139 ಜಿಇಎಲ್ 2025, ದಿನಾಂಕ: 30-10-2025 ರನ್ವಯ ಸೆಟ್ ಬ್ಯಾಕ್ ಮತ್ತು Coverage ನಲ್ಲಿ ಶೇ.15 ರವರೆಗಿನ ಉಲ್ಲಂಘನೆ ಹಾಗೂ ಎಫ್.ಎ.ಆರ್. ಮತ್ತು Car Parking ನಲ್ಲಿ ಶೇ.5 ರವರೆಗಿನ ಉಲ್ಲಂಘನೆ ಮಾಡಿರುವುದಕ್ಕೆ ನಿಗಧಿತ ದಂಡವನ್ನು ಪಾವತಿಸಿಕೊಂಡು ಪರಿಷ್ಕೃತ ನಕ್ಷೆಯನ್ನು ಪಡೆದುಕೊಳ್ಳಲು ಅವಕಾಶವಿರುತ್ತದೆ. |

**ಸಂಖ್ಯೆ: ನಅಇ 20 ಜಿಇಎಲ್ 2026 (ಇ)**

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು